**<u>ದಿನಾಂಕಃ 23.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಪಿ.ಎಲ್.ಎನ್. ವಕೀಲರಿಂದಃ</u>**

1) ವಾದಿ ಮಂಗಳ ಗೌರಮ್ಮ ನನ್ನ ಸಂಬಂಧಿಕರು ಎಂದರೆ ಸರಿ. ದಾವಾ ಸ್ವತ್ತನ್ನು ನಾನು ನೋಡಿರುತ್ತೇನೆ. ದಾವಾ ಸ್ವತ್ತಿನ ಸರ್ವೆ ನಂ. 383/4. ದಾವಾ ಸ್ವತ್ತಿನ ಪೂರ್ವಕ್ಕೆ ಕಣ್ವ ರಸ್ತೆ ಇದೆ ಎಂದರೆ ಸರಿ. ಪಶ್ಚಿಮಕ್ಕೆ 1ನೇ ಪ್ರತಿವಾದಿ ಬೋರೇಗೌಡರಿಗೆ ಸೇರಿದ ಸ್ವತ್ತು ಇದೆ ಎಂದರೆ ಸರಿ. ದಾವಾ ಸ್ವತ್ತಿನ ಉತ್ತರಕ್ಕೆ ಚೂಡೇಗೌಡರ ಸ್ವತ್ತು ಮತ್ತು ದಕ್ಷಿಣಕ್ಕೆ ಶಿವಮೂರ್ತಿ ರವರ ಸ್ವತ್ತು ಇರುತ್ತದೆ. ದಾವಾ ಸ್ವತ್ತನ್ನು 1ನೇ ವಾದಿಯ ಗಂಡ ಈ ಹಿಂದೆ 4 ಜನರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ವಾದಿಯ ಗಂಡನಿಂದ ಜಯಲಕ್ಷ್ಮಿ, ಮರಿಸ್ವಾಮಿ, ನಾಗೇಶ ಮತ್ತು ಜೋಗಯ್ಯ ರವರು ಖರೀದಿ ಮಾಡಿ ಮನೆ ಕಟ್ಟಿರುತ್ತಾರೆ. ವಾದಿಯ ಸ್ವತ್ತಿನ ಪೂರ್ವದಿಕ್ಕಿಗೆ ಕಣ್ಣ ರಸ್ತೆಯು ಉತ್ತರ ದಕ್ಷಿಣವಾಗಿ ಹಾದು ಹೋಗಿದೆ ಎಂದರೆ ಸರಿ. ಜಯಲಕ್ಷ್ಮಿ, ಮರಿಸ್ವಾಮಿ, ನಾಗೇಶ ಮತ್ತು ಜೋಗಯ್ಯ ರವರು ತಮ್ಮ ಮನೆಗಳ ಮುಂಭಾಗ ಪೂರ್ವ ಪಶ್ಚಿಮವಾಗಿ 10 ಅಡಿ ಜಾಗವನ್ನು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ 4 ಜನರ ಸ್ವತ್ತುಗಳ ನಂತರದಲ್ಲಿ ಪ್ರತಿವಾದಿಗೆ ಸೇರಿದ ಸ್ವತ್ತು ಇದೆ ಎಂದರೆ ಸರಿಯಲ್ಲ.

2) ದಾವಾ ಸ್ವತ್ತಿನ ಸರ್ವೆ ನಂಬರ್ ಮೊದಲು 383/4 ಆಗಿದ್ದು ಅದು ಪೋಡಿ ಆದ ನಂತರ ಸರ್ವೆ ನಂ. 383/17 ಆಗಿರುತ್ತದೆ ಎಂದರೆ ಸರಿ. 30 ವರ್ಷಗಳಿಂದ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿದಂತ ಖರೀದಿ ಪತ್ರಗಳಿಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ. ಸದರಿ ಖರೀದಿ ಪತ್ರಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಖರೀದಿ ಪತ್ರಗಳಲ್ಲಿ ಪೂರ್ವಕ್ಕೆ ಕಣ್ವ ರಸ್ತೆ, ಪಶ್ಚಿಮಕ್ಕೆ ಪ್ರತಿವಾದಿ ಬೋರೇಗೌಡರ ಜಮೀನು, ಉತ್ತರಕ್ಕೆ ಚೂಡೇಗೌಡರ ಜಮೀನು ಮತ್ತು ದಕ್ಷಿಣಕ್ಕೆ ಶಿವಮೂರ್ತಿ ರವರ ಜಮೀನು ಇರುವುದಾಗಿ ನಮೂದಿಸಲಾಗಿದೆ. ಸದರಿ ಚಕ್ಕುಬಂದಿಯಲ್ಲಿನ ಸ್ವತ್ತನ್ನು ಈ ಹಿಂದೆಯೇ ವಾದಿಯ ಗಂಡ ಮಾರಾಟ ಮಾಡಿದ್ದು ಅದರಲ್ಲಿ ವಾದಿಯವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಇಂದಿಗೂ ಸಹಾ ದಾವಾ ಸ್ವತ್ತಿಗೆ ಪ್ರತಿವಾದಿಯೇ ಮಾಲೀಕನಾಗಿದ್ದು ಆ ಸ್ವತ್ತಿನ ಮೇಲೆ ವಾದಿಗಳಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ನನ್ನ

ಸಂಬಂಧಿಕರು ಇರುವ ಕಾರಣ ನನಗೆ ಸತ್ಯಾಂಶ ತಿಳಿದಿದ್ದರೂ ಸಹ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**